ಹೋಗಿದ್ದಳಂತೆ...' ಎಂದು ಆಯಿ ಪೀಠಿಕೆ ಹಾಕುವಾಗ,

ಸಣ್ಣಕ್ಕೆ ಮುಣುಮುಣು ದೇವರ ನಾಮ ಹೇಳುತ್ತಿರಬಹುದಾಗಿದ್ದ ಹೆರ್ಪ ಮಧ್ಯಕ್ಕೆ ಬಾಯಿ ಹಾಕಿ, 'ಅದ್ಯಂತಾ ಕಾನೆ ವಿಮಲೆ! ಒಂದು ಕಾಲದಲ್ಲಿ ಗರಡಿ ಮನೆಯವರು ಸೊಪ್ಪು ಸವರಲು ಅಲ್ಲೇ ಹೋಗುತ್ತಿದ್ದರು. ಹಿಸೆ ನಂಬ್ರದಲ್ಲಿ ಗರಡಿಮನೆ ಎರಡು ಪಾಲಾಗಿ ಅದನ್ನ ಈಗ ಯಾರೂ ಮುಟ್ಟುವವರು ಗತಿಯಿಲ್ಲವಾಗಿದೆ. ಅದು ಗರಡಿ ಮನೆಯವರ ಬ್ಯಾಣದ ಅಂಚು, ಕಾನಲ್ಲ' ಎಂದು ತಿದ್ದಿ ಮತ್ತೆ ಹರೇರಾಮ ಜಪವನ್ನು ಹೇಳತೊಡಗಿದ್ದ.

ಹೆರ್ಪನ ಅಡ್ಡಬಾಯಿ ಮುಗಿದ ಮೇಲೆ ಆಯಿ ಮತ್ತೆ ಮುಂದುವರೆಸಿದ್ದಳು, 'ಜಿಗ್ಗು ಮುರಿಯಲು ಹೋಗಿದ್ದಳಂತೆ ಶರಾವತಿ. ಅದೆಲ್ಲಿಂದ ಬಂದು ಮುಟ್ಟಿತ್ತೋ ಏನೋ, ಮನುಷ್ಯರಿಗಿಂತಾ ಉಪ್ರದ ಕರಡಿ ಒಂದೇ ಸಲ ಮೈಮೇಲೆ ಹಾರಿ ಬಂತಂತೆ. ಶರಾವತಿಯ ಮೈಯೇರಿ, ಗಿಕ್ಕಳಿಸಿ ಗಿಕ್ಕಳಿಸಿ ಅತ್ಯಾಚಾರಾನೇ ಮಾಡಿತಂತೆ ದರಿದ್ರದ ಕರಡಿ ಮಾರಾಯ್ತಿ... ರಾಮ್ರಾಮ... ಗರ್ಭದ ಚೀಲವೇ ಹೊರಗೆ ಬಂದು ರಕ್ತದ ಓಕುಳೀಲಿ ಎಚ್ಚರತಪ್ಪಿ ಬಿದ್ದಿದ್ದಳಂತೆ ಅವಳು. ಹೆಂಡತಿ ಎಷ್ಟೊತ್ತಾದರೂ ಮನೆಗೆ ಬರಲಿಲ್ಲವೆಂದು ಕೋಟಿ ಬ್ಯಾಣಬಯಲು ಹುಡುಕಿದ ಮೇಲೆ ರಕ್ತದಲ್ಲಿ ಒದ್ದೆ ಮುದ್ದೆಯಾಗಿ ಬಿದ್ದ ಶರಾವತಿ ಸಿಕ್ಕಿದಳಂತೆ!! ಗಾಡಿ ಗೀಡಿ ಹುಡುಕುತ್ತಾ ಒಂದು ಮಿನೀಟೂ ತಡಮಾಡದೆ ಅವಳನ್ನು ಹೊತ್ತುಕೊಂಡೇ ಆರು ಮೈಲು ನಡೆದು ಆಸ್ಪತ್ರೆಗೆ ಒಯ್ದು ಅಂತೂ ಅವಳನ್ನು ಬಚಾವು ಮಾಡಿಕೊಂಡನಂತೆ ಕೋಟಿ' ಎಂದಳು.

'ಕರಡಿ ಅತ್ಯಾಚಾರ ಮಾಡುತ್ತದೆಯಾ ಆಯಿ, ಇದನ್ನು ನಾನೀಗ ನಂಬಬೇಕಾ? ಮೈಮೇಲೆ ಹಾರಿದಾಕ್ಷಣ ಅತ್ಯಾಚಾರ ಆಗುವುದಿಲ್ಲ ಮಾರಾಯ್ತಿ. ಆಯಿ ಇಲ್ಕೇಳು, ಕರಡಿ ಗಿಕ್ಕಳಿಸುವುದಿಲ್ಲ, ಮೈಯೆಲ್ಲಾ ಗೆಬರಿ ಪರಚುತ್ತದೆ. ಪ್ರಜ್ಞೆಯಿಲ್ಲದೆ ಸತ್ತವರಂತೆ ಬಿದ್ದ ಶರಾವತಿಯನ್ನು ನೋಡಿ ಹಾಗೆಯೇ ಬಿಟ್ಟುಹೋಗಿರಬೇಕು. ಇಲ್ಲದಿದ್ದರೆ ಶರಾವತಿ ಬದುಕಿರುತ್ತಿದ್ದಳಾ?' ಅಂತಂದೆ ಬಿಟ್ಟರೆ ಆಯಿಯ ಮಾತಿಗೆ ನಾನು ಸುತಾರಾಂ ಒಪ್ಪಿಗೆ ಸೂಚಿಸಲಿಲ್ಲ.

ಮುಂಡಗೋಡು, ಜೋಯ್ಡಾದಲ್ಲಿ ತೊಂದರೆಯಾದಂತೆ ನಮ್ಮ ಯಲ್ಲಾಪುರದ ಕಡೆ ಕರಡಿಗಳ ಆಕ್ರಮಣದಿಂದ ಪ್ರಾಣಹೋಗಿದ್ದು ಬಹಳ ಕಡಿಮೆಯೇ. ನಮ್ಮೂರಿನ ಸುತ್ತಲ ಕೆಲವರಿಗೆ ಸಣ್ಣಪುಟ್ಟ ಗಾಯಗಳಾದ ಪ್ರಕರಣಗಳೇನೋ ನಡೆದಿವೆ, ಇಲ್ಲ ಅಂತಲ್ಲ. ಆದರೆ ಅತ್ಯಾಚಾರವಾಗಿದ್ದನ್ನು ನಾನು ಕೇಳಿದ್ದು ಇದೇ ಮೊದಲು.

ನನ್ನ ವರಸೆಯಿಂದ ಒಮ್ಮೆಲೇ ಸೊಟ್ಟಗಾದ ಆಯಿ, 'ನಂಬಿದರೆ ನಂಬು, ಬಿಟ್ಟರೆ ಬಿಡು. ದಡ್ಡರಿಗಾದರೂ ತಿಳಿಸಿ ಹೇಳಬಹುದು, ಮೂರ್ಖರಿಗೆ, ಬುದ್ಧಿವಂತರ ಸೋಗು ಹಾಕಿಕೊಂಡವರಿಗೆ ತಿಳಿಸಿ ಹೇಳುವುದು ಬಹಳ ಕಷ್ಟ. ಊರಿಗೆ ಬಂದಾಗ ನೀನೇ ಖುದ್ದು ಶರಾವತಿ ಮನೆಗೆ ಹೋಗಿ ಮಾತನಾಡಿಸಿಕೊಂಡು ಬಾ, ಅವಳೇ ಹೇಳಿದರೆ ತಿಳಿಯುತ್ತದೆ ನಿನಗೆ' ಎಂದಳು.

ಆಯಿಯ ಸಿಟ್ಟಿಗೆ ಬೇರೆಯದೇ ಕಾರಣವಿದೆ. ಇನ್ನೂ ಹೆಚ್ಚು ಮಾತನಾಡಿದರೆ ಬೇಡದ ಮಾತುಗಳೆಲ್ಲ ಬರುತ್ತದೆಯೆಂದು ಶರಾವತಿಯ ಅತ್ಯಾಚಾರದ ಕುರಿತಾದ ಆಯಿಯ ಮಾತನ್ನು ನಿಜವೆಂಬಂತೆ ಒಪ್ಪಿ ನಾನೂ ಸುಮ್ಮನಾಗಿದ್ದೆ. ಆದರೆ ಇವತ್ತು ಹೀಗೆ ಮೂರ್ಸಂಜೆಯಲ್ಲಿ ಕಾಡು ದಾರಿಯಲ್ಲಿ ಒಬ್ಬಳೇ ನಡೆಯುವಾಗ ಆಯಿಯ ಮಾತು ನಿಜವೇ ಆಗಿದ್ದಿರಬಹುದು, ಒಬ್ಬಳೇ ಮನೆಗೆ ಹೊರಡುವಷ್ಟು ಭಂಡ ಧೈರ್ಯ ಮಾಡಬಾರದಿತ್ತೆನ್ನುವ ಭಾವನೆ ತೀವ್ರವಾದಷ್ಟೂ ಕತ್ತೆತ್ತಿ ಅತ್ತಿತ್ತ ನೋಡಿದರೂ ಕರಡಿಯೇ ಇದ್ದಂತೆ ಭಾಸವಾಗತೊಡಗಿತು.

ಶರಾವತಿಯ ಗುಂಗಿನಲ್ಲಿಯೇ ಮುಳುಗಿದ್ದ ನಾನು ಕೋರೆಗಣ್ಣಲ್ಲಿ ಒಮ್ಮೆ ಹಿಂತಿರುಗಿ ನೋಡಿದ್ದೇ